Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in** **principal@klsvdit.edu.in**

Date: 18-02-2022

**ಪತ್ರಿಕಾ ಪ್ರಕಟಣೆ:**

# ಮಾತೃಭಾಷಾ ದಿನಾಚರಣೆ ಪ್ರಯುಕ್ತ ಸಾಂಸ್ಕೃತಿಕ ಸ್ಪರ್ಧೆಗಳು

ಕರ್ನಾಟಕ ಲಾ ಸೊಸೈಟಿಯ ವಿಶ್ವನಾಥರಾವ್ ದೇಶಪಾಂಡೆ ತಾಂತ್ರಿಕ ಮಹಾವಿದ್ಯಾಲಯ, ಹಳಿಯಾಳದಲ್ಲಿ ಮಾತೃಭಾಷಾ ದಿನಾಚರಣೆಯ ಪ್ರಯುಕ್ತ ಫೆಬ್ರುವರಿ 16 ರಿಂದ 18 ರ ವರೆಗೆ ವಿದ್ಯಾರ್ಥಿಗಳಿಗಾಗಿ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಮೊದಲನೆ ದಿನ ನಡೆದ ಗಾಯನ ಸ್ಪರ್ಧೆಯಲ್ಲಿ ಸೃಷ್ಟಿ ಸುಗಾಟೆ ಪ್ರಥಮ ಸ್ಥಾನ ಮತ್ತು ವರ್ಜಿನಿಯಾ ಗೊಸಲ್ವೇಸ್ ದ್ವಿತೀಯ ಸ್ಥಾನ ಪಡೆದುಕೊಂಡರು ಎರಡನೆ ದಿನ ನಡೆದ ಆಶು ಭಾಷಣ ಸ್ಪರ್ಧೆಯಲ್ಲಿ ಸಿಮ್ರನ್ ಪ್ರಥಮ ಸ್ಥಾನ, ಜೆ ಲಲಿತಾ ಮತ್ತು ಮಂಜುನಾಥ ದ್ವಿತೀಯ ಸ್ಥಾನ ಪಡೆದುಕೊಂಡರು. ಇದೇ ಸಂದರ್ಭದಲ್ಲಿ ನಡೆದ ಚರ್ಚಾ ಸ್ಪರ್ಧೆಯಲ್ಲಿ ಸಿಮ್ರನ್ ಮುಲ್ಲಾ ಹಾಗೂ ವರ್ಜಿನಿಯಾ ಗೊಸಲ್ವೇಸ್ ಅವರ ತಂಡ ಪ್ರಥಮ ಸ್ಥಾನ ಮತ್ತು ಶ್ರವಣ್ ಪಾಟೀಲ್ ಹಾಗೂ ಸಾಯಿಪೂಜಾ ಎಸ್ ಅವರ ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿತು. ಕೊನೆಯ ದಿನ ನಡೆದ ನಿಬಂಧ ಸ್ಪರ್ಧೆಯಲ್ಲಿ ಅನಿತಾ ಹಳ್ಳಿಕೇರಿ ಪ್ರಥಮ ಸ್ಥಾನ ಮತ್ತು ನಾರಾಯಣಿ ಶಾನಭಾಗ್ ದ್ವಿತೀಯ ಸ್ಥಾನ ಗಳಿಸಿದರು. 40 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದ ಈ ಸ್ಪರ್ಧೆಗಳಲ್ಲಿ ಸ್ಪರ್ಧಾಳುಗಳು ಮಾತೃ ಭಾಷೆಯ ಮೂಲಕವೇ ಭಾಗವಹಿಸಲು ಅವಕಾಶ ನೀಡಲಾಗಿತ್ತು.

ಮಹಾವಿದ್ಯಾಲಯದ "ಕಲ್ಪವೃಕ್ಷ" ಕನ್ನಡ ಸಂಘದ ಸಂಚಾಲಕರಾದ ಪ್ರೊ. ಜಿ ಆರ್ ಸತ್ತಿಗೇರಿ ಸ್ವಾಗತಿಸಿದರು, ಪ್ರೊ. ನವೀನ ಹಿರೇಮಠ, ಪ್ರೊ. ಕಿರಣ ಹಿಟ್ಟಣಗಿ, ಪ್ರೊ. ಸ್ನೇಹಾ ಕುಲಕರ್ಣಿ, ಪ್ರೊ. ರೋಹಿಣಿ ಕಲ್ಲೂರ್, ಪ್ರೊ. ಲಕ್ಷ್ಮಿ ಹಟ್ಟಿಹೊಳಿ, ಪ್ರೊ. ವಿಜಯಲಕ್ಷ್ಮಿ ವಿ, ಪ್ರೊ. ರಾಕೇಶ ಪಾಟೀಲ್ ಕಾರ್ಯಕ್ರಮ ನಿರ್ವಹಿಸಿದರು. ವಿದ್ಯಾರ್ಥಿಗಳಲ್ಲಿರುವ ಮಾತೃಭಾಷಾ ಪ್ರತಿಭೆಗೆ ವೇದಿಗೆ ಒದಗಿಸುವುದು ಮತ್ತು ಭಾಷಾ ವೈವಿಧ್ಯತೆಯನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಎಂದು ಪ್ರಾಂಶುಪಾಲರಾದ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal


KARNATAK LAW SOCIETY'S
VISHWANATHRAO DESHPANDE
INSTITUTE OF TECHNOLOGY
HALIYAL
ಕರ್ನಾಟಕ ಲಾ ಸೊಸೈಟಿ
ವಿಶ್ವನಾಥರಾವ ದೇಶಪಾಂಡೆ
ತಾಂತ್ರಿಕ ಮಹಾವಿದ್ಯಾಲಯ
ಹಳಿಯಾಳ